ಇ) ಮೇಲ್ಕಂಡ ಸಂಸ್ಥೆಯು ಸರಿಯಾದ ಲೆಕ್ಕವಿಡದೆ, ಬಿಲ್ಲನ್ನು ನೀಡದೆ, ಎರಡು ಬಗೆಯ ಲೆಕ್ಕದ ಪುಸ್ತಕವಿಟ್ಟು ಲಕ್ಷಾಂತರ ರೂ.ಗಳ ತೆರಿಗೆಯನ್ನು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ಸರ್ಕಾರವು ಈ ಸಂಸ್ಥೆಯ ಪುಸ್ತಕಗಳನ್ನು ಸರಿಯಾಗಿ ಪರಿಶೋಧಿಸಿ ಮೇಲ್ಕಂಡ ವರ್ಷಗಳಿಗೆ ಸರ್ಕಾರಕ್ಕೆ ಬರಬೇಕಾದ ಮಾರಾಟ ತೆರಿಗೆ ಬಾಕಿಯನ್ನು ವಸೂಲಿ ಮಾಡುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಮಾರಾಟ ತೆರಿಗೆ ಪಾವತಿಯ ವಿವರಗಳು ಈ ಕೆಳಕಂಡಂತಿವೆ

ಬಿ.ವಿ ರಾಮಚಂದ್ರಪ್ಪ ಅಂಡ್ ಸನ್ಸ್, ಬೆಂಗಳೂರು.		ಬಿ.ವಿ. ರಾಮಚಂದ್ರಪ್ಪ ಅಂಡ್ ಕಂಪನಿ, ಬೆಂಗಳೂರು.
87-88	ರೂ.1,24,726.77	ರೂ.1,84,219.20
88-89	ರೂ. 20,265.24	ರೂ.1,98,971.85
89-90	ರೂ. 19,803.00	ರೂ. 1,42,799.39
90-91 (ಎಪ್ರಿಲ್ 90ರಿಂದ ಜನವರಿ 91ರತನಕ)	ರೂ.8,481.50	ರೂ.64,512.40

ಆ) ಇಲ್ಲ.

ಇ) ಇಲ್ಲ.

ಈ) ಅ) ಮತ್ತು ಇ) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಿದ್ದಯ್ಯನ ಕೋಟೆ ಮತ್ತು ಬಳ್ಳಾರಿ ಜಿಲ್ಲೆ ಕೊಡ್ಲಿಗಿ ತಾಲ್ಲೂಕಿನ ಕೊಂಭಿಹಳ್ಳಿ ಮದ್ಯೆ ಸೇತುವೆ ನಿರ್ಮಾಣ ಕಾರ್ಯ

31 - ಶ್ರೀ ಕೆ.ವಿ. ರವೀಂದ್ರ ಬಾಬು (ಕೊಟ್ಟೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನ ಕೋಟೆ ಮತ್ತು ಬಳ್ಳಾರಿ ಜಿಲ್ಲೆ ಕೊಡ್ಲಿಗಿ ತಾಲ್ಲೂಕಿನ ಕೊಂಭಿಹಳ್ಳಿ ಮಧ್ಯೆ ಸೇತುವೆ ನಿರ್ಮಾಣಕ್ಕಾಗಿ ಯಾವಾಗ ತಳಪಾಯವನ್ನು ಹಾಕಲಾಯಿತು.

ಆ) ಸೇತುವೆ ನಿರ್ಮಾಣದ ಕಾಮಗಾರಿಯ ಹಂತ.

ಇ) ಆ ಸೇತುವೆಗೆ ಇಲ್ಲಿಯವರೆಗೆ ಮಾಡಲಾಗಿರುವ ವೆಚ್ಚದ ಮೊತ್ತ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಸಿದ್ದಯ್ಯನ ಕೋಟೆ ಮತ್ತು ಕೊಂಭಿಹಳ್ಳಿ ಮಧ್ಯೆ ಸೇತುವೆಗಾಗಿ ತಳಪಾಯವನ್ನು (ಅಂದರೆ ಸಿದ್ದಯ್ಯನ ಕೋಟೆ ಹತ್ತಿರದ ಸೇತುವೆಗೆ) ಇನ್ನೂ ಹಾಕಿರುವುದಿಲ್ಲ.

ಆ) ಮೇಲೆ ತಿಳಿಸಿರುವ ಸೇತುವೆ ಕಾಮಗಾರಿಯ ನಿರ್ಮಾಣವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮದ ಸ್ಥಾಪನೆ

460 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಮಗ್ಗ ಅಭಿವೃದ್ಧಿ ನಿಗಮದ ರೀತಿಯಲ್ಲಿ ವಿದ್ಯುತ್ ಮಗ್ಗಗಳ ಪ್ರತ್ಯೇಕ ಅಭಿವೃದ್ಧಿ ನಿಗಮ ರಚಿಸುವುದರ ಬಗ್ಗೆ ಅಖಿಲ ಕರ್ನಾಟಕ ದೇವಾಂಗ ಯುವಜನ ವೇದಿಕೆ ಇವರಿಂದ ಸರ್ಕಾರಕ್ಕೆ ಮನವಿ ಬಂದಿರುವುದೇ?

ಆ) ಹಾಗಿದ್ದಲ್ಲಿ, ಈ ಬೇಡಿಕೆಯನ್ನು ಪೂರೈಸಿದರೆ, ದೇವಾಂಗ ಜನಾಂಗಕ್ಕೆ ಅಪಾರ ಆರ್ಥಿಕ ಲಾಭಕರವಾಗುವುದರಿಂದ ಹಾಗೂ ವಿದ್ಯುತ್ ಮಗ್ಗಗಳ ಚಟುವಟಿಕೆ ಅಭಿವೃದ್ಧಿಗೆ ನೆರವಾಗುವುದರಿಂದ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಂಗ್ಲೋ ಇಂಡಿಯನ್ ಪಂಗಡದವರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ

471 - ಶ್ರೀ ಡೇರಿಕ್ ಎಂ. ಫುಲ್ ಇನ್ ಫಾ (ನಾಮ ನಿರ್ದೇಶನ ಹೊಂದಿದವರು) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರಿಗೆ ಯಾವುದಾದರೂ ಯೋಜನೆಯಲ್ಲಿ ಸೌಲಭ್ಯ ದೊರೆಯುವುದೇ?

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಸೌಲಭ್ಯ ಹೊಂದಿದ ಆಂಗ್ಲೋ ಇಂಡಿಯನ್ನರ ಸಂಖ್ಯೆ.

ಇ) ಈ ಯೋಜನೆಯ ಉಪಯೋಗ ಹೊಂದಲು ಸಾಕಷ್ಟು ಅಲ್ಪಸಂಖ್ಯಾತರ ಪಂಗಡದವರುಗಳು ಮುಂದೆ ಬರದಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಕೊಡಿ.

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರು ಈ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದು.

1. ಸ್ವಾವಲಂಬನ ಯೋಜನೆ.
2. ವಾಹನ ಚಾಲನಾ ತರಬೇತಿ ಯೋಜನೆ
3. ಫೋರ್‌ಮನ್‌ಶಿಪ್ ತರಬೇತಿ ಯೋಜನೆ
4. ಕಂಪ್ಯೂಟರ್ ಟ್ರೈನಿಂಗ್ ಯೋಜನೆ

ಆ) ಆಂಗ್ಲೋ ಇಂಡಿಯನ್ನರನ್ನು ಒಳಗೊಂಡಂತೆ ಸೌಲಭ್ಯಗಳನ್ನು ಪಡೆದುಕೊಂಡಿರುವ ಕ್ರಿಶ್ಚಿಯನ್ ಜನಾಂಗದವರ ವಿವರಗಳು ಕೆಳಕಂಡಂತಿವೆ.

ಸ್ವಾವಲಂಬನೆ ಯೋಜನೆ	360
ವಾಹನ ಚಾಲನಾ ತರಬೇತಿ ಯೋಜನೆ	339
ಫೋರ್‌ಮನ್‌ಶಿಪ್ ತರಬೇತಿ	007
ಕಂಪ್ಯೂಟರ್ ಟ್ರೈನಿಂಗ್	003

ಇ) ನಿಜವಲ್ಲ-ನಿಗಮದ ಎಲ್ಲಾ ಯೋಜನೆಗಳಿಗೂ ಹೆಚ್ಚಿನ ಬೇಡಿಕೆ ಇದ್ದು ಅಲ್ಪಸಂಖ್ಯಾತರ ಪಂಗಡದವರು ಎಲ್ಲಾ ಯೋಜನೆಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿರುತ್ತಾರೆ.